**ದಿನಾಂಕಃ 21.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ. ಕೆ.ಟಿ.ಟಿ. ವಕೀಲರಿಂದಃ-

1) ನಾನು ಹಿಂದಿನ ಪಾಟೀ ಸವಾಲಿನಲ್ಲಿ ಹೇಳಿದ ಹಾಗೆ ಛಾಯಾಚಿತ್ರ ಇನ್ನೂ ಹಾಜರುಪಡಿಸಿಲ್ಲ. ದಾವಾ ಸ್ವತ್ತಿನಲ್ಲಿ ಕೆಲವು ಮನೆ ಕಟ್ಟಡ ನಿರ್ಮಾಣ ಮಾಡಲಾಗಿದೆ ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿ ನಮಗೆ ತೊಂದರೆ ನೀಡುತ್ತಿದ್ದ ಕಾರಣ ಪ್ರಸ್ತುತ ದಾವೆಯನ್ನು ಅವರ ವಿರುದ್ಧ ದಾಖಲು ಮಾಡಿದ್ದೇನೆ. ಖಾನೇಷಮಾರಿ ನಂ.142/120 1 ನೇ ಪ್ರತಿವಾದಿಗೆ ಸೇರಿದ್ದು, ಸದರಿ ಸ್ವತ್ತಿನಲ್ಲಿ ಅವರು ಸ್ವಾಧೀನಾನುಭವದಲ್ಲಿ ಇರುವುದು ಎಂದರೆ ಸಾಕ್ಷಿ ಅವರ ಸ್ವತ್ತು ಯಾವುದು ಎಂದೇ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಖಾನೇಷುಮಾರಿ ಸಂಖ್ಯೇ 142/120 ಯು ಸರ್ವೆ ನಂ.107/2 ರಲ್ಲಿ ಬರುತ್ತದೆ ಎಂದರೆ ಗೊತ್ತಿಲ್ಲ. 2 ನೇ ಪ್ರತಿವಾದಿಯ ಸ್ವತ್ತು ಖಾನೇಷಮಾರಿ ನಂ.141/119 ರ ನಿವೇಶನ ದಾವಾ ಸರ್ವೆನಂಬರ್ 107/2 ರಲ್ಲಿ ಇದೆ ಎಂದರೆ ಗೊತ್ತಿಲ್ಲ.

2) ನನಗೆ ಸಿದ್ದಾಚಾರರು ಯಾರು ಎಂದು ಗೊತ್ತಿಲ್ಲ. ಸಿದ್ದೇಗೌಡರ ಹೆಂಡತಿ ಸಿದ್ದಮ್ಮ ರವರು ಗೊತ್ತಿಲ್ಲ. ಸದರಿಯವರು ಸರ್ವೆ ನಂಬರ್ 107/2 ರಲ್ಲಿ ಒಂದು ನಿವೇಶನ ಖರೀದಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ನಿವೇಶನದಲ್ಲಿ ಸಿದ್ದಮ್ಮ ರವರು ವಾಸದ ಮನೆ ನಿರ್ಮಾಣ ಮಾಡಿ ವಾಸವಾಗಿದ್ದಾರೆ ಎಂದರೆ ಗೊತ್ತಿಲ್ಲ. ರಾಚಾಚಾರಿ ಮಗ ನಾಗರಾಜಾಚಾರಿ ರವರು ಗೋರೂಬಾಯಿ ಮತ್ತು ಅವರ ಮಕ್ಕಳಿಂದ ಸರ್ವೆ ನಂ.107 ರಲ್ಲಿ 50*65 ಅಳತೆಯ ನಿವೇಶನ ಖರೀದಿ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸದರಿಯವರು ನಿವೇಶನದಲ್ಲಿ ವಾಸದ ಮನೆ ನಿರ್ಮಾಣ ಮಾಡಿ 1993 ರಿಂದಲೂ ವಾಸವಾಗಿದ್ದಾರೆ ಎಂದರೆ ಗೊತ್ತಿಲ್ಲ.

3) ಮಾಯಿಗೌಡರ ಮಗ ಚಿಕ್ಕವೆಂಕಟೇಗೌಡರು ಶಿವ್ರೋಜಿ ರಾವ್ ರವರ 3 ನೇ ಮಗ ಸೂರ್ಯೋಜಿರಾವ್ ಸೂರ್ಯವಂಶಿ ರವರಿಂದ ಸರ್ವೆ ನಂ.107 ರಲ್ಲಿ ನಿವೇಶನ ಖರೀದಿ

ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸದರಿಯವರು ನಿವೇಶನದಲ್ಲಿ ವಾಸದ ಮನೆ ನಿರ್ಮಾಣ ಮಾಡಿ ವಾಸವಾಗಿದ್ದಾರೆ ಎಂದರೆ ಗೊತ್ತಿಲ್ಲ. ನಾನು ಕೆಂಪೇಗೌಡರ ವಿರುದ್ಧ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಗಳು ಖರೀದಿಸಿದ ಸ್ವತ್ತುಗಳು ಪಂಚಾಯಿತಿಯಲ್ಲಿ ನಕ್ಷೆ ಸಹಾ ಮಾಡಲಾಗಿದೆ ಎಂದರೆ ಗೊತ್ತಿಲ್ಲ. ಕೆಂಪೇಗೌಡರು ಪ್ರಸ್ತುತ ಮೃತಪಟ್ಟಿದ್ದಾರೆ. ಅವರ ಮರಣಾನಂತರ ಖಾತೆಯು ಅವರ ಹೆಂಡತಿ ಸರಸ್ವತಮ್ಮ ರವರ ಹಸೆರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ.

4) ದಾವೆ ಸಲ್ಲಿಸುವುದಕ್ಕೂ ಮೊದಲು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಹದ್ದುಬಸ್ತು ಮಾಡಿಸಲಾಗಿದೆಯೇ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಪ್ರಸ್ತುತ ವ್ಯವಸಾಯದ ಜಮೀನಾಗಿ ಉಳಿದುಕೊಂಡಿಲ್ಲ. ಸದರಿ ಸ್ವತ್ತಿನಲ್ಲಿ ಪಂಚಾಯಿತಿ ವ್ಯಾಪ್ತಿಯಲ್ಲಿ ನಿವೇಶನಗಳಾಗಿ ವಿಂಗಡಣೆ ಮಾಡಿ ವಾಸದ ಮನೆ ನಿರ್ಮಾಣ ಮಾಡಲಾಗಿದೆ ಎಂದರೆ ಸಾಕ್ಷಿ ಸ್ವಲ್ಪ ಭಾಗ ಇನ್ನೂ ವ್ಯವಸಾಯದ ಜಾಗ ಉಳಿದುಕೊಂಡಿದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಉಳಿಕೆ ಭಾಗದಲ್ಲಿ ನಿವೇಶನಗಳಾಗಿವೆ ಎಂದು ನುಡಿಯುತ್ತಾರೆ. ನಾನುದಾವಾ ಸ್ವತ್ತಿನಲ್ಲಿ 1 ಎಕರೆಯಲ್ಲಿ ಸ್ವಾಧೀನಾನುಭವದಲ್ಲಿ ಇರುವ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲೆ ಸಲ್ಲಿಸಿಲ್ಲ. ಪ್ರತಿವಾದಿಗಳ ಜಮೀನನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ